
## ಸಲೀಸಾಗಿ ಎತ್ತ್ಯಾನೆ

ಪಕ್ಕದ ಮನೆಯವರು ತಮ್ಮ ಮಗನ ಮದುವೆಗೆ ಲಗ್ನಪತ್ರಿಕೆ ಕೊಡಲು ಬಂದಿದ್ದರು. ಕುತೂಹಲಕ್ಕೆ ಸೊಸೆ ಹೇಗಿದ್ದಾಳೆ ತೋರಿಸಿ ಎಂದೆ. 'ತಡೀರಿ, ಮೊನ್ನೆ ಅದೇನೋ ಪ್ರೀಶೂಟ್ ಅಂತಾ ಮಾಡಸ್ಯಾರೆ, ತೋರಿಸ್ತೀನಿ' ಎಂದು ಮೊಬೈಲಿನಲ್ಲಿ ವಿಡಿಯೊ ತೋರಿಸಿದರು. ಹುಡುಗ, ಹುಡುಗಿಯನ್ನು ಎತ್ತಿಕೊಂಡು ಸಮುದ್ರದತ್ತ ಸಾಗುವ ಚಿತ್ರ ಇಷ್ಟವಾಯ್ತು. 'ಎಷ್ಟು ಆರಾಮಾಗಿ ಹುಡುಗಿಯನ್ನು ಎತ್ತಿದ್ದಾನೆ ನೋಡಿ' ಎಂದು ಮೆಚ್ಚುಗೆ ತಿಳಿಸಿದೆ. 'ಮನ್ಯಾಗೆ ಒಂದೈದು ಕೆಜಿ ಜ್ವಾಳದ ಚೀಲ ಎತ್ತಲ್ಲ, ಈಗ ಐವತ್ತು ಕೆಜಿ ಹುಡುಗೀನ ಎಷ್ಟು ಸಲೀಸಾಗಿ ಎತ್ತ್ಯಾನ ನೋಡ್ರೀ...' ಎನ್ನುತ್ತ ಕಾಫಿ ಹೀರಿದರು.

**ನಳಿನಿ ಟಿ. ಭೀಮಪ್ಪ**



---

## ಅಧಿಕಮಾಸ



ಕಳೆದ ವರ್ಷ ನಾನು ಬ್ಯಾಂಕಿನ ಹಳ್ಳಿಯ ಶಾಖೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ನಡೆದ ಘಟನೆ. ಅಜ್ಜಿಯೊಬ್ಬರು ತನಗೆ ಒಂದು ತಿಂಗಳ ಪಿಂಚಣಿ ಕಡಿಮೆ ಬಂದಿದೆ ಎಂದು ಬಂದಿದ್ದರು. ಅಜ್ಜಿಯ ಖಾತೆಸಂಖ್ಯೆ ಕೇಳಿದೆ. ಪಾಸ್‌ಬುಕ್ ಮುಂದೆ ಹಿಡಿದರು. ಅದನ್ನು ಪರಿಶೀಲಿಸಿದಾಗ ಎಲ್ಲಾ 12 ತಿಂಗಳ ಪಿಂಚಣಿ ಅವರ ಖಾತೆಯಲ್ಲಿ ಜಮಾ ಆಗಿತ್ತು. ಅದನ್ನು ಅವರಿಗೆ ತಿಳಿಸಿದಾಗ, 'ಅಲ್ರಿ ಸಾಹೇಬ್ರ, ಈ ಸಲ ಅಧಿಕ ಮಾಸ ಬಂದದಲ್ರಿ... ಅದಕ್ಕ ಒಂದು ತಿಂಗಳ ಹೆಚ್ಚಿಗಿ ಪಿಂಚಣಿ ಬರಬೇಕಲ್ರಿ... ಹಿಂಗ ಬಡವರಿಗೆ ಮೋಸ ಮಾಡಬ್ಯಾಡ್ರಿ' ಎಂದು ಅಂಗಲಾಚಿದಳು. ಅವಳಿಗೆ ಎಲ್ಲವನ್ನೂ ತಿಳಿಸಿ ಹೇಳುವಷ್ಟರಲ್ಲಿ ಸಾಕು ಸಾಕಾಯ್ತು.

**ಮಹೇಶ ಭರಡಿ**